2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ165/2021

| | | | |
|---|---|---|---|
| ಸಾಕ್ಷಿದಾರರ ಹೆಸರು | - | ರವಿಕುಮಾರ್ | ಪಿಡಬ್ಲ್ಯೂ-5 |
| ತಂದೆಯ ಹೆಸರು | - | ಚಂದ್ರಪ್ಪ | ಸಿಡಬ್ಲ್ಯೂ -8 |
| ವಯಸ್ಸು | - | 38 ವರ್ಷ | |
| ಉದ್ಯೋಗ | - | ಕ್ರೈನ್ ಆಪರೇಟರ್ | |
| ವಾಸ ಸ್ಥಳ | - | ಭದ್ರಾವತಿ | |

ದಿನಾಂಕಃ 09.12.2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

1. ಫ್ರಾಸಾ.1 ನನ್ನ ತಂಗಿ. ಮೃತ ಪ್ರಕಾಶ್ ನನ್ನ ತಂಗಿಯಾದ ಫ್ರಾಸಾ.1 ರವರ ಗಂಡ. ನ್ಯಾಯಾಲಯದಲ್ಲಿ ವೀಡಿಯೋ ಕಾನ್ಫರೆನ್ಸ್ ಮುಖಾಂತರ ಹಾಜರುಪಡಿಸಿರುವ ಆರೋಪಿತರನ್ನು ಘಟನೆ ನಡೆದ ಬಳಿಕ ನೋಡಿದ್ದೇನೆ.

2. ಚಾಸಾ.7 ನನ್ನ ಮಾವ ಅಂದರೆ ಮೃತನ ತಂದೆ. ಚಾಸಾ.5 ಗೊತ್ತು. ಆತ ಆಟೋ ಚಾಲಕ. ಚಾಸಾ.2 ಮತ್ತು ಚಾಸಾ.3 ರವರು ಪಂಚನಾಮೆಗೆ ಬಂದಿದ್ದ ಸಮಯದಲ್ಲಿ ನಾನು ಅವರನ್ನು ನೋಡಿದ್ದೇನೆ. ಚಾಸಾ.9 ರವರು ಗೊತ್ತು.

3. ನನ್ನ ಭಾವ ಮೃತ ಪ್ರಕಾಶ್ ಆಟೋ ಬಾಡಿಗೆಗೆ ಓಡಿಸುತ್ತಿದ್ದನು ಮತ್ತು ಆಗಾಗ್ಗೆ ಕಾರನ್ನು ಸಹ ಬಾಡಿಗೆಗೆ ಓಡಿಸುತ್ತಿದ್ದನು. ಈಗ್ಗೆ 1 ವರೆ ವರ್ಷಗಳ ಹಿಂದೆ ನನ್ನ ಭಾವ ಪ್ರಕಾಶ್ ನ ಕೊಲೆಯಾಗಿದೆ.

ದಿನಾಂಕ 17.07.2021 ರಂದು ನಾನು ಭದ್ರಾವತಿಯಲ್ಲಿದ್ದೆನು. ಆಗ ಬೆಳಿಗ್ಗೆ ಸುಮಾರು 10.15 ಗಂಟೆಗೆ ನನ್ನ ತಂಗಿ ಮಮತಾಳು ನನಗೆ ಫೋನ್ ಮಾಡಿ ಆಕೆಯ ಗಂಡ ದಿನಾಂಕ 14.07.2021 ರಂದು ಮಧ್ಯಾಹ್ನ 2.30 ಗಂಟೆಗೆ ಮನೆಯಲ್ಲಿ ಊಟ ಮಾಡಿಕೊಂಡು ಆಟೋವನ್ನು ಬಾಡಿಗೆಗೆ ತೆಗೆದುಕೊಂಡು ಹೋದವರು ಇನ್ನೂ ಬಂದಿಲ್ಲವೆಂದು ಮತ್ತು ಆ ದಿನ ಅಂದರೆ ದಿನಾಂಕ 17.07.2021 ರಂದು ಆಕೆ ಕಡೂರು ಪೊಲೀಸ್ ಠಾಣೆಗೆ ದೂರು ನೀಡಲು ಹೋದಾಗ ಯಾವುದೋ ಗಂಡಸಿನ ಮೃತ ದೇಹ ಸಿಕ್ಕಿರುವುದಾಗಿ ಪೊಲೀಸರು ಹೇಳಿ ಅದರ ಫೋಟೋವನ್ನು ಆಕೆಗೆ ತೋರಿಸಿದಾಗ ಆಕೆ ಅದರಲ್ಲಿರುವ ಶವ ತನ್ನ ಗಂಡ ಪ್ರಕಾಶನದ್ದು ಎಂದು ಗುರುತಿಸಿದ್ದಾಗಿ ನನಗೆ ತಿಳಿಸಿದಳು.

4. ನಂತರ ನಾನು ಕೂಡಲೇ ಕಡೂರು ಪೊಲೀಸ್ ಠಾಣೆಗೆ ಹೋದೆನು. ಅಲ್ಲಿ ನನ್ನ ಅತ್ತೆ, ಮಾವ, ನನ್ನ ತಂಗಿ ಮತ್ತು ಊರಿನವರು ಇದ್ದರು. ನನ್ನ ಭಾವ ಪ್ರಕಾಶನ ಮೃತ ದೇಹವನ್ನು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯ ಶವಾಗಾರದಲ್ಲಿ ಇರಿಸಿರುವುದಾಗಿ ತಿಳಿಸಿದರು. ನಂತರ ಮಧ್ಯಾಹ್ನ 2.00 ಗಂಟೆಗೆ ನಾವು ಮತ್ತು ಪೊಲೀಸರು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯ ಶವಾಗಾರಕ್ಕೆ ಹೋಗಿ ಶವವನ್ನು ನೋಡಿದೆವು. ಅದು ನನ್ನ ಭಾವ ಪ್ರಕಾಶನ ಮೃತ ದೇಹವಾಗಿತ್ತು. ಆತನ ಎರಡೂ ಕಣ್ಣಿನ ರೆಪ್ಪೆಗಳು ಊದಿಕೊಂಡಿದ್ದವು, ಕುತ್ತಿಗೆಯನ್ನು ಯಾವುದರಿಂದಲೋ ಬಿಗಿದ ಗುರುತು ಆಗಿತ್ತು ಮತ್ತು ಎಡಪಕ್ಕೆಯಲ್ಲಿ ಗಾಯವಾಗಿತ್ತು.

ಅದನ್ನು ನೋಡಿ ನನ್ನ ಭಾವನನ್ನು ಯಾರೋ ನನ್ನ ಭಾವನ ಆಟೋ ಮತ್ತು ಆತನ ಬಳಿ ಇದ್ದ ವಸ್ತುಗಳನ್ನು ಕಿತ್ತುಕೊಂಡು ಹೋಗುವ ಉದ್ದೇಶದಿಂದ ಆತನನ್ನು ಕೊಲೆ ಮಾಡಿರುವುದಾಗಿ ನಮಗೆ ತಿಳಿಯಿತು. ಆ ಸಮಯದಲ್ಲಿ ಕಡೂರು ಪೊಲೀಸರು ನನ್ನನ್ನು ವಿಚಾರಿಸಿದರು. ಆಗ ನಾನು ಅವರಿಗೆ ಮೇಲಿನ ವಿಷಯಗಳನ್ನು ತಿಳಿಸಿ ಹೇಳಿಕೆ ನೀಡಿದ್ದೇನೆ.

5. ಸಾಕ್ಷಿಯು ಈಗಾಗಲೇ ನಿಪಿ.2 ರಿಂದ 4 ಎಂದು ಗುರುತಿಸಲಾಗಿರುವ ಫೋಟೋಗಳನ್ನು ನೋಡಿ ಅವುಗಳಲ್ಲಿ ನನ್ನ ಭಾವ ಪ್ರಕಾಶನ ಮೃತದೇಹವಿರುವುದಾಗಿ ಮತ್ತು ಆತನ ಮೈ ಮೇಲೆ ಆಗಿರುವ ಗಾಯಗಳು ಕಂಡು ಬರುವುದಾಗಿ ನುಡಿದಿರುತ್ತಾರೆ.

6. ದಿನಾಂಕ 21.07.2021 ರಂದು ಟಿವಿಗಳಲ್ಲಿ ನನ್ನ ಭಾವ ಪ್ರಕಾಶನನ್ನು ಕೊಲೆ ಮಾಡಿ ಆಟೋವನ್ನು ತೆಗೆದುಕೊಂಡು ಹೋಗಿದ್ದ ಆರೋಪಿಗಳನ್ನು ಕಡೂರು ಪೊಲೀಸರು ಬಂಧಿಸಿರುವುದಾಗಿ ಪ್ರಚಾರವಾಗುತ್ತಿತ್ತು. ಅದನ್ನು ತಿಳಿದು ನಾನು, ನನ್ನ ತಂಗಿ, ನನ್ನ ಅತ್ತೆ, ಮಾವ ಕಡೂರು ಪೊಲೀಸ್ ಠಾಣೆಗೆ ಹೋಗಿದ್ದೆವು. ಅಲ್ಲಿ ನನ್ನ ಭಾವ ಓಡುಸುತ್ತಿದ್ದ ಕೆ ಎ 66/0586 ನೋಂದಣಿ ಸಂಖ್ಯೆಯುಳ್ಳ ಆಟೋ ಇತ್ತು. ನಂತರ ಪೊಲೀಸರಿಂದ ವಿಚಾರ ತಿಳಿಯಲಾಗಿ ಚಿಕ್ಕಮಗಳೂರು ಸಂತೆ ಮಾರುಕಟ್ಟೆ ವಾಸಿಗಳಾದ ಶಬ್ಬೀರ್ ಮತ್ತು ಆತನ ತಂದೆ ಸುಬಾನ್ ಎಂಬ ವ್ಯಕ್ತಿಗಳು ದಿನಾಂಕ 14.07.2021 ರಂದು ನನ್ನ

ಭಾವ ಪ್ರಕಾಶನ ಆಟೋವನ್ನು ನಂಜಪ್ಪನಹಳ್ಳಿಗೆ ಹೋಗಲು ಬಾಡಿಗೆಗೆ ಕರೆದುಕೊಂಡು ಹೋಗಿ ನಂತರ ನನ್ನ ಭಾವನಿಗೆ ಡ್ರಿಂಕ್ಸ್ ಮಾಡಿಸಿ ಹಗ್ಗದಿಂದ ಆತನ ಕುತ್ತಿಗೆಯನ್ನು ಬಿಗಿದು ಕೊಲೆ ಮಾಡಿ ಆತನ ಶವವನ್ನು ಹೇಮಗಿರಿ ಕೆರೆಯ ಏರಿಯಲ್ಲಿ ಹಾಕಿ ನನ್ನ ಭಾವನ ಆಟೋ ಮತ್ತು ಆತನ ಬಳಿ ಇದ್ದ ಹಣವನ್ನು ತೆಗೆದುಕೊಂಡು ಹೋಗಿರುವುದಾಗಿ ತಿಳಿಯಿತು.

7. ಸಾಕ್ಷಿಯು ಈಗಾಗಲೇ ನಿಪಿ.7 ಎಂದು ಗುರುತಿಸಲಾಗಿರುವ ಫೋಟೋವನ್ನು ನೋಡಿ ಅದರಲ್ಲಿ ನನ್ನ ಭಾವ ಮೃತ ಪ್ರಕಾಶ ಓಡಿಸುತ್ತಿದ್ದ ಆಟೋ ಕಂಡು ಬರುವುದಾಗಿ ನುಡಿದಿರುತ್ತಾರೆ.

8. ಅದೇ ದಿನ ಅಂದರೆ ದಿನಾಂಕ 21.07.2021 ರಂದು ಸಹ ಪೊಲೀಸರು ನನ್ನನ್ನು ವಿಚಾರಿಸಿದ್ದಾರೆ. ಆಗ ನಾನು ಅವರಿಗೆ ಮೇಲಿನ ವಿಷಯಗಳನ್ನು ತಿಳಿಸಿ ಹೇಳಿಕೆ ನೀಡಿದ್ದೇನೆ.

**(ಪಾಟೀ ಸವಾಲು: ಆರೋಪಿತರ ಪರ ವಕೀಲರು ಸಾಕ್ಷಿಯ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ ಮೇರೆಗೆ ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಯಿತು.)**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಹೇಮಾ.